ಕಾವೇರಿ ವಾಟರ್‌ಸೆಲ್‌ನಲ್ಲಿ ಅಧಿಕಾರಿಗಳು ರೊಟೇಶನ್ ಬೇಸಿಸ್ (ಒಬ್ಬರಾದ ನಂತರ ಒಬ್ಬರು) ಮಾತ್ರ ಇಲಾಖೆಯಿಂದ ಕಾರ್ಯ ನಿರ್ವಹಿಸುತ್ತಾರೆ.

ಕರ್ನಾಟಕ ಉದ್ಯೋಗ ಮಿತ್ರ ಕಛೇರಿಯಲ್ಲಿ ಯಾವುದೇ ಹುದ್ದೆಗಳು ಖಾಲಿ ಇರುವುದಿಲ್ಲ.

(ಅ) ರಲ್ಲಿನ ಉಳಿದ ಸಂಸ್ಥೆಗಳು ರಾಜ್ಯಸರ್ಕಾರದ ಉದ್ಯಮಗಳ ಸಂಪರ್ಕ ಶಾಖೆಗಳಾಗಿದ್ದು ಸದರಿ ಶಾಖೆಗಳ ಆಡಳಿತ ನಿರ್ವಹಣೆಯನ್ನು ಬೆಂಗಳೂರಿನಲ್ಲಿನ ಸದರಿ ಸಂಸ್ಥೆಗಳ ಕೇಂದ್ರ ಕಛೇರಿಗಳೇ ನೋಡಿ ಕೊಳ್ಳುತ್ತವೆ.

ಕರ್ನಾಟಕ ಭವನದಲ್ಲಿ ಮಂಜೂರಾಗಿರುವ ಹುದ್ದೆಗಳ ಬಗ್ಗೆ

2688 (3224) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ - ಗ್ರಾಮೀಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವದೆಹಲಿಯ ಕರ್ನಾಟಕ ಭವನದಲ್ಲಿ ಮಂಜೂರಾಗಿರುವ ಹುದ್ದೆಗಳೆಷ್ಟು; ಈ ಹುದ್ದೆಗಳಲ್ಲಿ ಕರ್ನಾಟಕ ರಾಜ್ಯದವರೆಷ್ಟಿದ್ದಾರೆ; ಅನ್ಯ ರಾಜ್ಯದವರೆಷ್ಟು;

ಆ) ಕರ್ನಾಟಕ ಭವನದಲ್ಲಿ ಸಾಕಷ್ಟು ಕನ್ನಡಿಗ ಸಿಬ್ಬಂದಿ ಇಲ್ಲದೆ ಇರುವುದರಿಂದ ಕರ್ನಾಟಕದಿಂದ ಹೋಗುವ ಅತಿಥಿಗಳಿಗೆ ತೊಂದರೆ ಯುಂಟಾಗುತ್ತಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 1998-99ಮತ್ತು 1999-2000ನೇ ಸಾಲಿನಲ್ಲಿ ದೆಹಲಿ ಕರ್ನಾಟಕ ಭವನವು ಬಾಡಿಗೆ ಆಧಾರದ ಮೇಲೆ ಪಡೆದ ಕಾರುಗಳ ಸಂಖ್ಯೆ ಎಷ್ಟು; ಮತ್ತು ಈ ಸಂಬಂಧಪಾವತಿ ಮಾಡಿರುವ ಒಟ್ಟು ಮೊತ್ತವೆಷ್ಟು;

ಈ) ಕರ್ನಾಟಕ ಭವನದಿಂದ 1998-99ಮತ್ತು 1999-2000ನೇ ಸಾಲಿನಲ್ಲಿ ಬಂದಿರುವ ಒಟ್ಟು ಆದಾಯವೆಷ್ಟು; ಹಾಗೂ ಆಗಿರುವ ವೆಚ್ಚವೆಷ್ಟು? (ಬಾಡಿಗೆ ಕಾರುಗಳ ವೆಚ್ಚವನ್ನು ಸೇರಿ)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಕರ್ನಾಟಕ ಭವನದಲ್ಲಿ ಒಟ್ಟು ಮಂಜೂರಾಗಿರುವ 199 ಹುದ್ದೆಗಳಲ್ಲಿ 169 ನೌಕರರು ಕಾರ್ಯ ನಿರ್ವಹಿಸುತ್ತಿದ್ದು, ಅವರಲ್ಲಿ72 ಜನ ಕನ್ನಡೇತರರು ಹಾಗೂ 97 ಜನ ಕನ್ನಡಿಗರು ಇದ್ದಾರೆ.

ಆ) ಇಲ್ಲ.

ಇ)

ವರ್ಷ	ಕಾರು ಸಂಖ್ಯೆ	ಪಾವತಿ ಮಾಡಿರುವ ಹಣ
1998-1999	1253	ರೂ. 5,51,154.00
1999-2000	813	ರೂ. 3,70,129.00
ಒಟ್ಟು	**2066**	**ರೂ. 9,21,283.00**

ಈ)	ವರ್ಷಗಳು	ಆದಾಯ
	1998-1999	ರೂ. 47,40,637.00
	1999-2000	ರೂ. 59,55,672.00
	ಒಟ್ಟು	ರೂ. 1,06,96,309.00

ಕರ್ನಾಟಕ ಭವನದಲ್ಲಿರುವ ಎರಡು ಲೆಕ್ಕ ಶೀರ್ಷಿಕೆಗಳಲ್ಲಿ ಆಗಿರುವ ವೆಚ್ಚ :

	1998-1999	1999-2000
2070 ಒಪಿಎಸ್	3,19,86,288	4,15,39,845
2050 ಎಸ್‌ಜಿಎಸ್	88,84,644	91,57,202
ಒಟ್ಟು	4,08,70,932	5,06,97,047

ಬಾಡಿಗೆ ಕಾರುಗಳ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2070 ಪಿಎಸ್ ಮೂಲಕ ಪಾವತಿಸಲಾಗಿದೆ.

ರಾಜ್ಯದಲ್ಲಿ ಹೊಸದಾಗಿ 36 ಡಿಸ್ಟಿಲರಿಗಳನ್ನು ಪ್ರಾರಂಭಿಸಲು ಅನುಮತಿ

2689 (3225) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮೀಣ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996ರಲ್ಲಿ ರಾಜ್ಯದಲ್ಲಿ ಹೊಸದಾಗಿ 36ಡಿಸ್ಟಿಲರಿಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದು ನಿಜವೆ? (ಅವುಗಳ ಹೆಸರು, ವಿಳಾಸಗಳನ್ನು ನೀಡುವುದು).

ಆ) ಈ ಡಿಸ್ಟಿಲರಿಗಳು 1998ರಿಂದ ಉತ್ಪಾದನೆ ಆರಂಭಿಸದಿದ್ದರೆ ಅನುಮತಿ ರದ್ದುಗೊಳಿಸುವುದಾಗಿ ಷರತ್ತು ವಿಧಿಸಿರುವುದು ನಿಜವೆ?

ಇ) ಈ ಪೈಕಿ ಎಷ್ಟು ಡಿಸ್ಟಿಲರಿಗಳು ಕೆಲಸ ಪ್ರಾರಂಭಿಸಿವೆ ಮತ್ತು ಅವುಗಳ ಉತ್ಪಾದನಾ ಪ್ರಮಾಣವೆಷ್ಟು?

ಈ) ಕೆಲಸ ಪ್ರಾರಂಭಿಸದೇ ಇರುವ ಡಿಸ್ಟಿಲರಿಗಳು ಯಾವುವು;

ಉ) ಇವುಗಳ ಲೈಸೆನ್ಸ್‌ನ್ನು ಏಕೆ ರದ್ದು ಪಡಿಸಿಲ್ಲ?

ಶ್ರೀ ಎಂ. ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಹೌದು. 1996 ಕ್ಕಿಂತ ಬಹಳ ಹಿಂದೆಯೇ ಮಂಜೂರಾಗಿ ಉತ್ಪಾದನೆಯನ್ನು ಪ್ರಾರಂಭಿಸದಿದ್ದ 38 ಡಿಸ್ಟಿಲರಿಗಳಿಗೆ ದಿನಾಂಕ30-6-1998ರೊಳಗೆ ಉತ್ಪಾದನೆಯನ್ನು ಪ್ರಾರಂಭಿಸಲು ನಿರ್ದೇಶನ ನೀಡಲಾಗಿತ್ತು. ಮುಂದೆ ಈ ಅವಧಿಯನ್ನು ದಿನಾಂಕ 30-6-1999ರ ವರೆಗೆ ವಿಸ್ತರಿಸಲಾಯಿತು.

ಇ) ಈ 38 ಡಿಸ್ಟಿಲರಿಗಳ ಪೈಕಿ 24 ಘಟಕಗಳು ಉತ್ಪಾದನೆಯನ್ನು ಪ್ರಾರಂಭಿಸಿವೆ. ಅವುಗಳ ಹೆಸರು ಮತ್ತು ಅವು ಉತ್ಪಾದಿಸಿದ ಮಧ್ಯಸಾರ ಮತ್ತು ಫೆನ್ನಿಗಳ ವಿವರಗಳನ್ನು ಅನುಬಂಧ -'ಎ'ಯಲ್ಲಿ ತೋರಿಸಿದೆ.

ಈ) 14 ಡಿಸ್ಟಿಲರಿಗಳು ಉತ್ಪಾದನೆಯನ್ನುಪ್ರಾರಂಭಿಸಿರುವುದಿಲ್ಲ. ಅಂತಹ ಡಿಸ್ಟಿಲರಿಗಳ